# ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:19-11-2020ರ ನಡವಳಿಗಳು

**ವಿಷಯದ ಸಂಖ್ಯೆ: 442 /2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಇಲಾಖೆ ದಾಖಲೆಗಳಲ್ಲಿ ದಾಖಲಾಗಿರುವ ಸ್ವತ್ತುಗಳಿಗೆ ತೆರಿಗೆದಾರರು / ಅರ್ಜಿದಾರರಿಗೆ ನೀಡಲಾಗುತ್ತಿರುವ ಖಾತಾ ಪ್ರಮಾಣ ಪತ್ರ ಮತ್ತು ಖಾತಾ ಉದ್ಧೃತ ಭಾಗಕ್ಕೆ ಪ್ರಸ್ತುತ ಕ್ರಮವಾಗಿ ರೂ.25/- ಮತ್ತು ರೂ.100/- ಗಳನ್ನು ವಸೂಲು ಮಾಡಲಾಗುತ್ತಿದೆ.

ಇತ್ತೀಚೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಕೈಗೊಳ್ಳಬಹುದಾದ ಆಡಳಿತಾತ್ಮಕ ವೆಚ್ಚಗಳ ಪರಿಶೀಲನೆಯಲ್ಲಿ ಖಾತಾ ಪ್ರಮಾಣ ಪತ್ರ ಮತ್ತು ಖಾತಾ ಉದ್ಧೃತ ಭಾಗಕ್ಕೆ ಸ್ವೀಕರಿಸಲಾಗುತ್ತಿರುವ ಶುಲ್ಕವು ಹಲವಾರು ವರ್ಷಗಳ ಹಿಂದೆ ನಿಗಧಿಪಡಿಸಲಾಗಿದ್ದು, ಸದರಿ ಶುಲ್ಕವು ಅತ್ಯಂತ ಕಡಿಮೆ ಇರುತ್ತದೆ. ಆದುದರಿಂದ ಕಂದಾಯ ಇಲಾಖೆಯಲ್ಲಿ ಆಸ್ತಿಗಳ ದಾಖಲೆಗಳ ಸಂಬಂಧವಾಗಿ ನೀಡಲಾಗುತ್ತಿರುವ ಖಾತಾ ಪ್ರಮಾಣ ಪತ್ರ ಮತ್ತು ಖಾತಾ ಉದ್ಧೃತ ಭಾಗದ ದಾಖಲೆಗಳಿಗೆ ಕ್ರಮವಾಗಿ ರೂ.100/- ಮತ್ತು ರೂ.500/- ಗಳಿಗೆ ಪರಿಷ್ಕರಿಸಿ ಪ್ರಸ್ತುತ ಆಡಳಿತ ವೆಚ್ಚಗಳ ನಿರ್ವಹಣೆ ಹಿನ್ನಲೆಯಲ್ಲಿ ಅನಿವಾರ್ಯವಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ಷೆಡ್ಯೂಲ್ III ರಲ್ಲಿನ ತೆರಿಗೆ ನಿಯಮಾವಳಿಗಳ ಅಡಿಯಲ್ಲಿ ಈ ಶುಲ್ಕವನ್ನು ವಸೂಲಾತಿ ಮಾಡುವ ಬಗ್ಗೆ ಹೊಸದಾಗಿ ಅಳವಡಿಸಿಕೊಳ್ಳುವಲ್ಲಿ ಸರ್ಕಾರದ ಅನುಮೋದನೆ ನೀಡುವಂತೆ ಕೋರಲಾಗುವುದು.

ಮೇಲಿನ ಹಿನ್ನಲೆಯಲ್ಲಿ ಖಾತಾ ಪ್ರಮಾಣ ಪತ್ರ ಮತ್ತು ಖಾತಾ ಉದ್ಧೃತ ಭಾಗಕ್ಕೆ ಸ್ವೀಕರಿಸಲಾಗುತ್ತಿರುವ ಶುಲ್ಕವನ್ನು ಕ್ರಮವಾಗಿ ರೂ.100/- ಮತ್ತು ರೂ.500/-ಗಳಿಗೆ ಪರಿಷ್ಕರಿಸುವ ಸಂಬಂಧ ಸೂಕ್ತ ನಿರ್ಣಯ ಕೈಗೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ಮುಂದೆ ದಿನಾಂಕ:16-09-2020ರಂದು ಟಿಪ್ಪಣಿಯನ್ನು ಮಂಡಿಸಲಾಗಿತ್ತು. ಈ ಸಂಬಂಧ ದಿನಾಂಕ:29-09-2020ರಂದು ನಡೆದ ಸಭೆಯ ವಿಷಯದ ಸಂಖ್ಯೆ:19 (442)/ 2020-21ರಲ್ಲಿ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ.

> "ಖಾತಾ ಪ್ರಮಾಣ ಪತ್ರ ಮತ್ತು ಖಾತಾ ಉದ್ಧೃತ ಭಾಗ ಸ್ವೀಕೃತಿ ಶುಲ್ಕ ಪರಿಷ್ಕರಿಸುವ ಸಂಬಂಧ, ನಾಗರೀಕರಿಗೆ ನೀಡಲಾಗುತ್ತಿರುವ ಈ ಸೇವೆಗಳಿಗೆ ಪಾಲಿಕೆ ಭರಿಸುವ ಖರ್ಚು ಎಷ್ಟು ? ಉದಾರಣೆಗೆ ಸಿಬ್ಬಂದಿ ವೆಚ್ಚ, ಪ್ರಿಂಟಿಂಗ್ ವೆಚ್ಚ, ರೆಕಾರ್ಡ್ ವೆಚ್ಚ ಇತ್ಯಾದಿ, ಇದೆಲ್ಲವುಗಳ ಬಗ್ಗೆ ಒಂದು ಅಂದಾಜು ವೆಚ್ಚದ ವಿವರ ನೀಡುವುದು ಖಾತಾ ಪ್ರಮಾಣ ಪತ್ರ ಮತ್ತು ಖಾತಾ ಉದ್ಧೃತ ಭಾಗಕ್ಕೆ 'ಪಾಲಿಕೆಯಲ್ಲಿ ಆಗತಕ್ಕಂತಹ ಖರ್ಚು ಆಧಾರದ ಮೇಲೆ ಶುಲ್ಕ ಪರಿಷ್ಕರಿಸಬಹುದಾಗಿದೆ. ಸ್ಪಷ್ಟ ಮಾಹಿತಿಯೊಂದಿಗೆ ಪುನರ್ ಮಂಡಿಸುವುದು".

ಈ ಸಂಬಂಧ ಪರಿಶೀಲಿಸಲಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆ 100 ವಾರ್ಡ್‌ಗಳ ವ್ಯಾಪ್ತಿಯಲ್ಲಿರುವ ಸ್ವತ್ತುಗಳ ಖಾತಾ ಪ್ರಮಾಣ ಪತ್ರ ಹಾಗೂ ಉದ್ಧೃತ ಭಾಗವನ್ನು ಒದಗಿಸಲು ನಾಗರೀಕ ಸೇವಾ ಕೇಂದ್ರಗಳನ್ನು ತೆರೆಯಲಾಗಿರುತ್ತದೆ. ಸದರಿ ಕಛೇರಿಯಲ್ಲಿ ಮುಖ್ಯವಾಗಿ ಖಾತಾ ಪ್ರಮಾಣ ಪತ್ರ ಹಾಗೂ ಉದ್ಧೃತ ಭಾಗದ ವಿತರಣೆ, ಜೊತೆಗೆ ಆಸ್ತಿತೆರಿಗೆ ಸಂಗ್ರಹಣೆ ಇತ್ಯಾದಿ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುವುದು.

ಸದರಿ ಕಛೇರಿಯಲ್ಲಿ ಪ್ರಸ್ತಾಪಿತ ಸೇವೆಯನ್ನು ಒದಗಿಸಲು ಅವಶ್ಯಕವಾಗುವ ಮಾನವ ಸಂಪನ್ಮೂಲ, ವಿದ್ಯುತ್ ಉಪಕರಣಗಳು, ಸದರಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳ ವೇತನ ಮತ್ತು ಇತ್ಯಾದಿಗಳಿಗಾಗಿ ಮಾಹೆಯಾನ ರೂ.2.00 ಲಕ್ಷಗಳಾಗುವುದೆಂದು ಅಂದಾಜಿಸಲಾಗಿರುತ್ತದೆ. ಈ ರೀತಿ ಪಾಲಿಕೆ ವ್ಯಾಪ್ತಿಯಲ್ಲಿ 11 ನಾಗರೀಕ ಸೇವಾ ಕೇಂದ್ರಗಳಿದ್ದು, ಪ್ರತಿಯೊಂದು ಕೇಂದ್ರಕ್ಕೆ ಮಾಹೆಯಾನ ಕನಿಷ್ಠ ರೂ.2.00ಲಕ್ಷಗಳಂತೆ 11 ಕೇಂದ್ರಗಳಿಗೆ ಒಟ್ಟು ರೂ.22.00ಲಕ್ಷಗಳ ವೆಚ್ಚವನ್ನು ಪಾಲಿಕೆ ವತಿಯಿಂದ ಭರಿಸಬೇಕಾಗಿರುತ್ತದೆ.

ಈ ಎಲ್ಲಾ ಕೇಂದ್ರಗಳಿಂದ ಪ್ರತಿ ಮಾಹೆಯಾನ ಖಾತಾ ಪ್ರಮಾಣ ಪತ್ರ ಹಾಗೂ ಉದ್ಧೃತ ಭಾಗವನ್ನು ಕೋರಿ ತೆರಿಗೆದಾರರಿಂದ / ಸಾರ್ವಜನಿಕರಿಂದ ಅಂದಾಜು 900/- ರಿಂದ 1000 ಅರ್ಜಿಗಳು ಸ್ವೀಕೃತವಾಗಬಹುದಾಗಿರುತ್ತದೆ. ಪ್ರಸ್ತುತ ಸದರಿ ಪ್ರತಿಗಳನ್ನು ಒದಗಿಸಲು ಪ್ರತಿಯೊಂದು ಪ್ರತಿಗೆ ರೂ.125/- ರಂತೆ 1000 ಅರ್ಜಿಗಳಿಗೆ ಲೆಕ್ಕಾಚಾರ ಮಾಡಲಾಗಿ, ರೂ.125000/-ಗಳಷ್ಟು ಮೊತ್ತವನ್ನು ತೆರಿಗೆದಾರರಿಂದ ಸ್ವೀಕರಿಸಲಾಗುತ್ತಿದೆ. ಅಂದರೆ, ರೂ.125000/-ಗಳಷ್ಟು ಮೊತ್ತವನ್ನು ಸಂಗ್ರಹಿಸಲು ಪಾಲಿಕೆ ವತಿಯಿಂದ ರೂ.22,00,000/- ಗಳಷ್ಟು ಮೊತ್ತವನ್ನು ಖರ್ಚು ಮಾಡಲಾಗುತ್ತಿರುತ್ತದೆ. ಮುಂದುವರೆದಂತೆ, 2020-21ನೇ ಸಾಲಿನ ಆಯವ್ಯಯದಲ್ಲಿ ಖಾತಾ ಪ್ರಮಾಣ ಪತ್ರ ಮತ್ತು ಉದ್ಧೃತ ಭಾಗಕ್ಕೆ ರೂ.6.50 ಕೋಟಿಗಳಷ್ಟು ಅಂದಾಜಿಸಲಾಗಿದೆ. ಈ ಪೈಕಿ ದಿ:28-10-2020 ರವರೆಗೆ ರೂ.12.00 ಲಕ್ಷಗಳಷ್ಟು ಖಾತಾ ಪ್ರಮಾಣ ಪತ್ರ ಹಾಗೂ ಉದ್ಧೃತ ಭಾಗದ ಪ್ರತಿಗಳ ವಿತರಣೆಯಿಂದ ಸಂಗ್ರಹಿಸಲಾಗಿರುತ್ತದೆ.

ಮೇಲಿನ ಹಿನ್ನಲೆಯಲ್ಲಿ ನಗರ ಪಾಲಿಕೆ ಆರ್ಥಿಕ ಹಿತದೃಷ್ಟಿಯಿಂದ ಖಾತಾ ಪ್ರಮಾಣ ಪತ್ರಕ್ಕೆ ರೂ.100/- ಮತ್ತು ಉದ್ಧೃತ ಭಾಗಕ್ಕೆ ರೂ.500/- ರಂತೆ ಶುಲ್ಕಗಳನ್ನು ಪರಿಷ್ಕರಿಸಿ ನಿಗಧಿಪಡಿಸುವುದು ಅತ್ಯವಶ್ಯಕವಾಗಿರುತ್ತದೆ. ಈ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04-11-2020ರ ಟಿಪ್ಪಣಿ.

**ತೀರ್ಮಾನ :** **ಆಯುಕ್ತರವರ ದಿನಾಂಕ:04-11-2020ರ ಟಿಪ್ಪಣಿಯನ್ನು ಒಪ್ಪಿದೆ.**

(ಗೌರವ ಗುಪ್ತ)
**ಆಡಳಿತಗಾರರು**